ಸಿಸಿ ನಂಃ 3596/2023
ಸಿ.ಡಬ್ಲ್ಯೂ 4/ಪಿ.ಡಬ್ಲ್ಯೂ 5

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 3596/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಹಸನ ಸಾಬ |
| ತಂದೆಯ ಹೆಸರು | ಃ | ರೆಹಮನ ಸಾಬ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕೃಷಿ |
| ವಾಸ ಸ್ಥಳ | ಃ | ಸಿಂಗನಹಳ್ಳಿ ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 28-02-2025

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಚಾಸಾ .1 ನನ್ನ ಸಂಬಂಧಿ , ಚಾಸಾ 5, ಚಾಸಾ 1 ರವರ ಮಗ . ಮಾರ್ಚ ತಿಂಗಳ -2023 ರಂದು ಸಂಜೆ ಒಂದು ದಿನ ರಾತ್ರಿ 9.00 ಗಂಟೆ ಸಮಯದಲ್ಲಿ ನಾನು ನವಲೂರು ಮಾಬೂಬ ಶಿವಾನಿ ದರ್ಗ ಹತ್ತಿರ ನಿಂತಿದ್ದೆನು . ನನ್ನ ಜೋತೆ ಚಾ ಸಾ 5 ಇದ್ದರು . ಮಸಿದಿ ಒಳಗಡೆ ಜಗಳ ಮಾಡುವ ಬಾಯಿ ಮತ್ತು ಶಬ್ದ ಕೇಳಿತು ಅಗ ನಾವು ಮತ್ತು ಜನರು ಮಸೀದಿ ಒಳಗಡೆ ಹೋಗಿ ನೋಡಿದೆವು . ನವಲೂರಿನ ಕೆಲ ಜನ ಸೇರಿ ಕಟ್ಟಿಗೆಯಿಂದ ಚಾಸಾ 1 ರವರ ತಲೆಗೆ ಹೊಡೆದಿದ್ದರು . ಆ ಕಾರಣ ಚಾಸಾ 1 ರವರ ತಲೆಯಿಂದ ರಕ್ತ ಬಂದಿತ್ತು ಆಗ ನಾನು ಮತ್ತು ಚಾ ಸಾ .5 ಜಗಳ ಬಿಡಿಸಿರುತ್ತೇವೆ . ನಂತರ ನಾವು ಆತನನ್ನು ಮನೆಗೆ ಕರೆದುಕೊಂಡು ಹೋದೆವು . ಯಾವ ಕಾರಣಕ್ಕಾಗಿ ಹೊಡೆದಿರುತ್ತಾರೆಂದು ಕಾರಣ ಗೊತ್ತಾಗಿರುವುದಿಲ್ಲ .ಚಾಸಾ 1 ರವರನ್ನು ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆ ಗೆ ಕರೆದು ಕೊಂಡು ಹೋಗಿರುತ್ತೇವೆ . ಚಾಸಾ1 ದೂರು ನೀಡಿರುತ್ತಾರೆ. ಘಟನೆರಾತ್ರಿ 9.15 ಕ್ಕೆ ಆಗಿರುತ್ತಾರೆ . ಆರೋಪಿತರು ಚಾ ಸಾ.1 ರವರ ಮನೆ ಮುಂದಿ ನಿಂತು ಹೊಡೆಯುತ್ತೇವೆ ನಿನ್ನನ್ನು ಕೊಲ್ಲುತ್ತೇವೆಂದು ಹೇಳಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ . ಚಾಸಾ1 ರವರಿಗೆ ಹೊಡೆದ ಕಟ್ಟಿಗೆ ಹಾಗೂ ಬಡಿಗೆಯನ್ನು ಗುರುತಿಸುತ್ತೇನೆ . ಈಗ ನೊಡುತ್ತಿರುವ ಕಟ್ಟಿಗೆ ಮತ್ತು ಬಡಿಗೆಯಿಂದ

ಆರೋಪಿತರು ಚಾಸಾ .1 ರವರಿಗೆ ಹೊಡೆದಿರುತ್ತಾರೆ . ಅವುಗಳನ್ನು ಈಗಾಗಲೇ ಎಮ್ ಓ.1 ಮತ್ತು ಎಮ್ ಓ.2 ಎಂದು ಗುರುತಿಸಲಾಗಿರುತ್ತದೆ. ಆರೋಪಿತರನ್ನು ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಮತ್ತು 4 ನೇ ಆರೋಪಿತ ಚಾಸಾ.1 ರವರಿಗೆ ಹೊಡೆದಿರುತ್ತಾರೆ .

**ಹಿರಿಯ ಸರಕಾರಿ ಅಬಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಪಾಟೀ ಸವಾಲಿಗೆ ಅನೂಮತಿ ನೀಡಲಾಯಿತು.**

ಪಾಟೀ ಸವಾಲು: ಹಿಸಅಅ ರವರಿಂದ

1 ನೇ ಆರೊಪಿತನಿಗೆ ಚಾಸಾ.1 ಅವರ ಮಸಿದಿಯ ಸದಸ್ಯತ್ವವನ್ನು ತೆಗೆಯಲು ಏಕೆ ಅರ್ಜಿ ಕೊಟ್ಟಿರುತ್ತಿರಿ ಎಂದು ಕೇಳಿದೆನು. ಆಗ 1 ನೇ ಆರೋಜಪಿತನು ನಾನೆ ಕೊಟ್ಟಿರುತ್ತೇನೆ ಏನು ಮಾಡುತ್ತೀಯಾ ಬೋಸಡಿ ಮಗನೆ ಎಂದು ಬೈದು ಅವನನ್ನ ಅಡ್ಡಗಟ್ಟಿ ಆತನು ಹಾಗು 2 ರಿಂದ 4 ನೇ ಆರೋಪಿತರು ಸೇರಿ ಅವ್ಯಾಚ್ಯವಾಗಿ ಬೈದಾಡಿ 1 ಮತ್ತು 2 ನೇ ಆರೋಪಿತರು ಸೇರಿ ಕಟ್ಟಿ ಗೆ ಮತ್ತು ಬಡಗಿಯಿಂದ ಹೊಡೆದಿದ್ದ ಗೊತ್ತಾಗಿರುತ್ತದೆ ಎಂದರೆ ಸರಿ .

**ಆರೋಪಿತ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.